<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಮಳವಳ್ಳಿ</u>

<u>ಸಿ.ಸಿ ನಂ:1943/2017</u>

ಪಿಡಬ್ಲೂ: 2 ಸಿಡಬ್ಲ್ಯೂ: 3

ಸಾಕ್ಷಿಯನ್ನು ತಾ: 21.11.2023 ರಂದು ಪ್ರಮಾಣ ಮಾಡಿಸಲಾಯಿತು

| | |
|---|---|
| ಸಾಕ್ಷಿದಾರರ ಹೆಸರು | ನಾಗರಾಜು |
| ತಂದೆಯ ಹೆಸರು | ಮಲ್ಲಯ್ಯ |
| ವಯಸ್ಸು | 37 ವರ್ಷ |
| ಉದ್ಯೋಗ | ಬಸ್ ನಿರ್ವಾಹಕ |
| ವಾಸ | ನೆಟ್ಕಲ್ ಗ್ರಾಮ. |

**<u>ಮುಖ್ಯ ವಿಚಾರಣೆ: ಶ್ರೀ ಸ.ಸ.ಅ ರವರಿಂದ</u>**

1. ಚಾಸಾ-1, 2, 4 ರಿಂದ 8 ಗೊತ್ತಿಲ್ಲ. ಆರೋಪಿಗಳು ಗೊತ್ತಿಲ್ಲ.

2. ನನಗೆ ಈ ಘಟನೆ ಕುರಿತು ಯಾವ ಸಂಗತಿಗಳು ಗೊತ್ತಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಶ್ರೀ ಸ ಸ ಅ ರವರು ಅನುಮತಿಯನ್ನು ಕೋರುತ್ತಾರೆ. ಕಡತವನ್ನು ಪರೀಕ್ಷಿಸಲಾಗಿ ಸಾಕ್ಷಿಯು ಪ್ರತ್ಯಕ್ಷ ಸಾಕ್ಷಿದಾರನಾಗಿದ್ದು ತನ್ನ ಸಾಕ್ಷಿಗೆ ವಿರುದ್ದ ಸಾಕ್ಷ್ಯವನ್ನು ನುಡಿಯುತ್ತಿದ್ದಾರೆ ಆದರಿಂದ ಅವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಯನ್ನು ನೀಡಲಾಯಿತು.)

**<u>ಪಾಟೀಸವಾಲು: ಶ್ರೀ ಸ.ಸ.ಅ. ರವರಿಂದ:</u>**

3. ದಿನಾಂಕ 27.05.2017 ರಂದು ರಾತ್ರಿ 07.15 ಗಂಟೆ ಸಮಯದಲ್ಲಿ ಚಾಸಾ.1 ರವರು 1 ನೇ ಆರೋಪಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದಾನೆಂದು ಅವರ ಅಂಗಡಿ ಬಳಿ ಪರಿಶೀಲಿಸಲು ಬಂದಿರುತ್ತಾರೆಂದರೆ ಸರಿಯಲ್ಲ. ಆಗ 90 ಎಂ ಎಲ್ ನ 8 ಒರಿಜಿನಲ್ ಚಾಯ್ಸ್ ಖಾಲಿ ಮದ್ಯದ ಟೆಟ್ರಾ ಪ್ಯಾಕೇಟುಗಳು ಬಿದ್ದಿದ್ದನ್ನು ನೋಡಿ ಅಂಗಡಿಯೊಳಗೆ ಪರಿಶೀಲನೆ ಮಾಡಿದಾಗ 90 ಎಂ ಎಲ್ ನ 3 ಒರಿಜಿನಲ್ ಚಾಯ್ಸ್ ನ ಟೆಟ್ರಾ ಪ್ಯಾಕೇಟುಗಳು ಸಿಕ್ಕಿರುತ್ತವೆ ಎಂದರೆ ಸರಿಯಲ್ಲ. ಆಗ ಚಾಸಾ.1 ರವರು ಒಂದನೇ ಆರೋಪಿಯನ್ನು ಮತ್ತು ಮದ್ಯವನ್ನು ತೆಗೆದುಕೊಂಡು ತನ್ನ ಮೋಟಾರು ಸೈಕಲ್ ನಲ್ಲಿ ಬೆಳಕವಾಡಿ ಪೋಲೀಸ್ ಠಾಣೆಗೆ

ಹೋಗಿರುತ್ತಾರೆಂದರೆ ಸರಿಯಲ್ಲ. ನಂತರ 2 ನೇ ಆರೋಪಿಯು ಅವರ ಹಿಂದೆಯೇ ತನ್ನ ಮೋಟಾರ್ ಸೈಕಲ್ ನಂ.ಕೆಎ-50 ವಿ-3356 ರಲ್ಲಿ ಅವರನ್ನು ತಡೆಯಲು ಹೊರಟು ಹೋಗಿರುತ್ತಾರೆಂದರೆ ಸರಿಯಲ್ಲ. ಆಗ ಚಾಸಾ.1 ರವರನ್ನು ಅಡ್ಡಗಟ್ಟಿ ಅವರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿ ಮಾಡಿರುತ್ತಾರೆಂದರೆ ಸರಿಯಲ್ಲ.

4. ಈ ಕುರಿತು ದಿಃ 29.07.2017 ರಂದು ................................................................................................ .................... ಪೋಲೀಸರಿಗೆ ಈ ಮೇಲೆ ಓದಿ ಹೇಳಿದ ರೀತಿ ಹೇಳಿಕೆ ನೀಡಿರುತ್ತೇನೆಂದರೆ ಸರಿಯಲ್ಲ. ಸಾಕ್ಷಿಯು ಸದರಿ ಹೇಳಿಕೆಯನ್ನು ಒಪ್ಪದ ಕಾರಣ ಅದನ್ನು ನಿಪಿ.2 ಎಂದು ಗುರುತಿಸಲಾಯಿತು.

5. ನಾನು ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ- ಆರೋಪಿ ಪರ ವಕೀಲರಿಂದಃ- ಇಲ್ಲ**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ